# WHITE PAPER

Written BY

MAHESH.R

CONTACT:amaheshr@gmail.com
9738500671

©MAHESH.R

1.INT.ROAD & FRONT OFF HOME.DAY

FADE IN :

ಅರ್ಲೀ ಮಾರ್ನಿಂಗ್ ಒಂದು ಅಟ್ಲಸ್ ಸೈಕಲ್ ನಲ್ಲಿ ಪೇಪರ್ ಹಾಕುವ ಹುಡ್ಗ,
ಮಾಮೂಲಿ ಟೀ-ಶರ್ಟ ಹಳೇ ಪ್ಯಾಂಟ್ ಹಾಕಿರುತ್ತಾನೆ. ಮುಖಕ್ಕೇ ಕರ್ಚಿಫ್ ಕಟ್ಟಿರುತ್ತಾನೆ.
ಸೈಕಲ್ ನಲ್ಲಿ ಬಂದು ಮನೆ ಮುಂದೆ ಪೇಪರ್ ಹಾಕಿ, ಸ್ವಲ್ಪ ಯೋಚ್ನೆ ಮಾಡಿ, ಮನೆ
ಒಳಗೆ ಹೋಗುತ್ತಾನೆ. ಓಪನಿಂಗ್ ಕ್ರೆಡಿಟ್ ಶುರುವಾಗುತ್ತೆ

**ಪೇಪರ್ ಸೀನ:**

(ಕ್ಯಾಮರ ಆಪೊಸಿಟ್ ಫೋಕಸ್

ಔಟ್ ಇಂದ ಫೋಕಸ್ ಇನ್ ಆಗಿ,

ಕ್ಯಾಮರ ಮುಂದೆ

ನಿಲ್ಲುತಾನೆ)

**ಪೇಪರ್ ಸೀನ:**

(ಡೋರ್ ನಾಕ್ ಮಾಡುವ ಹಾಂಡ್ ಕಟ್ ಇನ್ ಶಾಟ್ಸ್)

**ಮೇಡಮ್**

ನೋ ರಿಪ್ಲೈ ಫ್ರುಮ್ that ಸೈಡ್, ಇನ್ನೊಂದುಸಲ ಬೆಲ್ ಮಾಡಿ, ಡೋರ್ ನಾಕ್
ಮಾಡ್ತಾನೆ

**ಪೇಪರ್ ಸೀನ:**

(ಆ ಕಡೆ ಈ ಕಡೆ ನೋಡುತ್ತಾನೆ, ಕ್ಯಾಮರ ಫಾಲೊ)

**ಮೇಡಮ್ ನಾನು ಪೇಪರ್ ಸೀನ**

ಮೊಬೈಲ್ ನಲ್ಲಿ ಟೈಮ್ ನೋಡುತಾ, ಮತ್ತೆ ಸ್ವಲ್ಪ ಕೋಪದಲ್ಲಿ

**ಪೇಪರ್ ಸೀನ:**

(ಕ್ಲೋಸ್ ಅಪ್)

**ಇವತ್ತು ದುಡ್ಡು ಕೊಡ್ತೀನಿ ಅಂತ ಹೇಳಿ, ಎಲ್ಲಿ ಹೋಯ್ತಪ್ಪ ಈ ಮಿಶಿನೂ,**

ಸ್ವಲ್ಪ ಕಿಟಕಿ ಹತ್ರ ಬಂದು ನೋಡುತ್ತಾನೆ, ಸ್ಟಡೀ ಟೇಬಲ್ ಮೇಲೆ ಕೈ ಇಟ್ಟುಕೊಂಡು
ಮಲಗೀರುತ್ತಾಳೆ.

**ಪೇಪರ್ ಸೀನ:**

(From ವಿಂಡೊ outside)

**ಹೇ ಮೇಡಮ್, ಇಲ್ಲೇ ಮಲ್ಗಿದ್ದೀರಾ ? ನಾನ್ ಅಷ್ಟೋತ್ತಿಂದ ಕೂಗ್ತಾ ಇದೀನಿ**

ಅವಳು ಯಾವ್ದು ರಿಪ್ಲೈ ಮಾಡಲ್ಲ, ಇವನು ಸ್ವಲ್ಪ ಗಾಬರಿ ಇಂದ ಫೇಸ್ ಎಕ್ಸ್‌ಪ್ರೆಶನ್
ಚೇಂಜ್ ಆಗುತ್ತೆ

**ಪೇಪರ್ ಸೀನ:**

(ರಿಗ್ ಶಾಟ್)

**ಮೇಡಮ್, ಮೇಡಮ್ ಎದ್ದೇಳಿ!!!**

ಗಾಬರಿಗೆ ಏನ್ ಮಾಡ್ಬೇಕು ಅಂತ ಗೊತ್ತಾಗ್ದೆ, ಟೆನ್ಶನ್ ಲಿ ಮುಖ ಒರೆಸಿಕೊಂಡು ಮೊಬೈಲ್ ತೆಗ್ದು ಕಾಲ್ ಮಾಡ್ತಾನೆ

**ಪೇಪರ್ ಸೀನ:**

(ಕಟ್ ಇನ್ ಶಾಟ್ಸ್)

**ಹೆಲೋ,**

ಪೋಲೀಸ್ ಸೈರನ್ ಮತ್ತು ಆಂಬ್ಯುಲೆನ್ಸ್ ಸೈರನ್ ಸ್ಟಾರ್ಟ್ ಆಗುತ್ತೆ

2.INT.CHAMELI HOME.DAY

Cut To:

ಇಬ್ರು ಕಾನ್ಸ್ಟೆಬಲ್ಸ್ ಡೋರ್ ಅನ್ನು ಭುಜದಿಂದ ಗುದ್ದುತಾರೆ.

ಸ್ಕ್ರೀನ್ ಬ್ಲ್ಯಾಕ್ ಆಗಿ ಸಿನಿಮಾ ಟೈಟಲ್ ಬರುತ್ತೆ.

ವಾರ್ಡ್ ಬಾಯ್ಸ್ ಬಂದು ಹುಡ್ಗಿಯನ್ನು ಎತ್ತಿ ಸ್ಟ್ರೆಚರ್ ಮೇಲೆ ತಗೊಂಡು ಹೋಗ್ತಾರೆ. ಕಾನ್ಸ್ಟೆಬಲ್ಸ್ ಹಿಂದೆ ಇನ್ಸ್ಪೆಕ್ಟರ್ ( ವೈಟ್ ಪೋಲೋ ಟೀ-ಶರ್ಟ್, ಕ್ರೀಮ್ ಕಲರ್ ಪ್ಯಾಂಟ್ with ಬ್ಲ್ಯಾಕ್ ಗಾಗಲ್) ಬರುತ್ತಾರೆ, ಇನ್ಸ್ಪೆಕ್ಟರ್ ಸುತ್ತ ನೋಡುತ್ತಾ ಸಿಗರೇಟ್ ಹಚ್ಕೊಳ್ಳುತಾನೆ,

ಇನ್ಸ್ಪೆಕ್ಟರ್ ಸ್ಟಡೀ ಡೆಸ್ಕ್ ಮೇಲೆ ಕೂತು ಸರ್ಚ್ ಮಾಡ್ಬೇಕಾದ್ರೆ ಒಂದು ಲೆಟರ್ ಸಿಗುತ್ತೆ ಇನ್ಸ್ಪೆಕ್ಟರ್ ಸಿಗರೇಟ್ ಅನ್ನು ಬಾಯಲ್ಲಿ ಇಟ್ಟು, ಗಾಗಲ್ ತೆಗ್ದು ಟೀ-ಶರ್ಟ್ಗೆ ಹಾಕೀ ಸಿಗ್ರೇಟ್ ಕೈಲೀ ಹಿಡಿದುಕೊಂಡು ಓದೋಕೆ ಶುರು ಮಾಡ್ತಾನೆ.

3.INT.CHAMELI HOME.NIGHT

DISSOLVE TO:

ಚಮೇಲಿ ಡೆಸ್ಕ್ ಮೇಲೆ ಕೂತು ಬರಿಯುವ ಸೀನ್, ಅಮ್ಮ ಅಂತ ಬರಿಯೋದು ರಿಜಿಸ್ಟರ್ ಮಾಡುತ್ತಾ

**ಚಮೇಲಿ (ವಾಯ್ಸ್ ಓವರ್):**

(ಎಕ್ಸ್ಟ್ರೀಮ್ ಕ್ಲೋಸ್ ಅಪ್, ಕಟ್ ಇನ್, ಮಿಡ್)

**ಅಮ್ಮ ಅಂತ ಕರಿಯೋ ಯೋಗ್ಯತೇನು ಇಲ್ಲಾ ನನಗೆ. ಚೆನ್ನಾಗಿರ್ಲಿ ಅಂತ ದುಡ್ಡು ಕಳಿಸ್ತಿದೆ, ಅದು ನನಗೆ ಓದೋಕು ಸಾಕಾಗ್ತಿರ್ಲಿಲ್ಲ**

4.EXT.COLLEGE.DAY

DISSOLVE TO:

ಒಂದು ರಸ್ತೆ, ಜನ ಓಡಾಡುವ ಜಾಗ, ಅಥವಾ ಬಸ್ ನಿಲ್ದಾಣ

**ಚಮೇಲಿ (ವಾಯ್ಸ್ ಓವರ್) :**

(ವೈಡ್ & ಕ್ಲೋಸಪ್ )

**ಎಲ್ಲ ಹುಡ್ಗೀರು ಎಷ್ಟೋಂದು ದುಡ್ಡು ಖರ್ಚು ಮಾಡಿಕೊಂಡು ಚೆನ್ನಾಗೀದ್ದಾರೆ, ಬಟ್**

ಚಮೇಲಿ ಡ್ರೆಸ್, ಚಪ್ಪಲಿ ರಿಜಿಸ್ಟರ್ ಮಾಡುತ್ತಾ

**ಚಮೇಲಿ (ವಾಯ್ಸ್ ಓವರ್):**

**ನಾನು ಕಿತ್ತೋಗಿರೋ ಚಪ್ಪಲಿ, ಹರಿದು ಹೋಗಿರೋ ಬಟ್ಟೆ, ಅವತ್ತೇ ಡಿಸೈಡ್ ಮಾಡ್ದೆ ಏನಾದ್ರೂ ಆಗ್ಲಿ ಇರೋದು ಒಂದು ಲೈಫು ಶೋಕಿ ಮಾಡ್ಬೇಕು ಅಂತ. ಓಪನಿಂಗ್ ಸೂಪರ್ ಆಗೇ ಇತ್ತು**

5.EXT.PG(BUS STOP).DAY

MATCH CUT:

PG ಹತ್ರ ನಿಂತಿರೋದು, ಅರವಿಂದ್ ನ ವಾರಗಣ್ಣಿಂದ ನೋಡೋದು, ಆಮೇಲೆ ನೋಡಿ ಸ್ಮೈಲ್ ಮಾಡೋದು, ಅರವಿಂದ್ ಮತ್ತೆ ಮತ್ತೆ ನೋಡೋದು, ಸ್ಮೈಲ್ ಕೊಡೋದು

**ಚಮೇಲಿ (ವಾಯ್ಸ್ ಓವರ್):**

(ವೈಡ್ ಶಾಟ್ & ಮಿಡ್ ಶಾಟ್ಸ್)

**ನಮ್ಮ PG ಹತ್ರ ಒಬ್ಬ ದಿನ ನನ್ನ ನೋಡ್ತಿದ್ದ, ಆಮೇಲೆ ನಾನು ನೋಡೋಕೆ ಶುರು ಮಾಡ್ದೆ, ಮುಂಡೇದು ನೆಕ್ಸ್ಟ್ ಡೇನೇ ಹಲ್ಲು ಗಿಂಜಿಕೊಂಡು ಐ ಲವ್ ಯೂ ಅನ್ಬಿಡೋದಾ**

ಅರವಿಂದ್ ಬೈಕ್ ಲೀ ಬಂದು ಮುಂದೆ ನಿಂತ್ಕೋತಾನೆ

**ಅರವಿಂದ್:**

(w/s & c/s)

**I love you**

ಚಮೇಲಿ ಸುಮ್ನೆ ನಗ್ತಾ ಇರ್ತಾಳೆ, ಅರವಿಂದ್ ಬೈಕ್ಗೆ ಹಾಕಿರೋ ಹಾರನ ಕಿತ್ತು ಕೊಡ್ತಾ

**ಅರವಿಂದ್:**

(ವೈಡ್ ಶಾಟ್ )

**ರೀ ರೋಸ್ ತಂದಿಲ್ಲ, ಸದ್ಯಕ್ಕೆ ಈ ಸಾಮಂತಿಗೆ ಹೂವ ಅಡ್ಜಸ್ಟ್ ಮಾಡ್ಕೊಳಿ**

ಫುಲ್ ನಗು ಬಂದು. ಓಕೇ ಅನ್ನೋತರ ಸ್ಮೈಲ್ ಕೊಡ್ತಾಳೆ

ಅಲ್ಲಿಂದ ಬೈಕ್ ಲೀ ಹೋಗ್ತಾರೆ.

6. INT.hotel roop.DAY

BACK TO:

ಚಮೇಲಿ ಜೂಸ್ ಕೂಡಿದಮೇಲೆ, ಮೊಬೈಲ್, ಪರ್ಸ್ ಎಲ್ಲಾ ಎತ್ತಿಕೊಳುತ್ತಾ

**ಚಮೇಲಿ:**

(ಕ್ಲೋಸ್ ಅಪ್ & ವೈಡ್)

**ನಾಳೆ ನನಗೆ ಸ್ಪೆಶಲ್ ಕ್ಲಾಸ್ ಇದೆ, ಸೀಗೋಕೆ ಆಗಲ್ಲ**

**ಅರವಿಂದ್:**

**ಈವ್ನಿಂಗ್ ??**

**ಚಮೇಲಿ:**

**ಇಲ್ಲಾ. ಫೈನಲ್ ಸೆಮ್ ಅಲ್ವಾ.. ಓದ್ಕೊಳೋಕೆ ತುಂಬಾ ಇರುತ್ತೆ. ಸ್ಪೆಶಲ್ ಕ್ಲಾಸಿಲ್ಲೀ ಬೇರೆ ಕೊರಿತಾರೆ, ತಲೆ ನೋವು ಬಂದಿರುತ್ತೆ**

**ಅರವಿಂದ್:**

**ಸರಿ. ಲವ್ ಯೂ ಟೇಕ್ ಕೇರ್ ಬೈ**

**ಚಮೇಲಿ:**

**ಹ್ಮ್ ಬೈ**

ಚಮೇಲಿ ಹೋದ್ಮೇಲೆ, ಸಿಗರೇಟ್ ಬಾಯಿಗೆ ಇಟ್ಟಿಕೊಳುತ್ತಾ

**ಅರವಿಂದ್:**

**ಸನ್ಡೇ ಕ್ಲಾಸ್ ಇರುತ್ತಾ ?? ಇರಲಿ..**

7. ext.Badsha shop.Day

Match Cut:

ಸಿಗರೇಟ್ ಹೊಗೆ ಬಿಡುತ್ತಾ, call ಮಾಡುತ್ತಾನೆ

**ಅರವಿಂದ್:**

(ಕ್ಲೋಸ್ ಅಪ್)

**ಎಲ್ಲಿದ್ಯಾ ಚಂದು**

**ಚಮೇಲಿ:**

**ಸ್ಪೆಷಲ್ ಕ್ಲಾಸ್ ಅಂತ ಹೇಳಿದ್ನಲ್ಲ**

**ಅರವಿಂದ್:**

**ಓ!! ಮರೆತು ಬಿಟ್ಟೆ. ನಾಳೆ ನಮ್ಮ ಮೀಟಿಂಗ್ ಸ್ಪಾಟ್ಗೆ ಬನ್ನಿ**

**ಚಮೇಲಿ:**

**ಓಕೇ ಓಕೇ ಬೈ**

**ಅರವಿಂದ್:**

**ಹ್ಮ್ ಬೈ**

ವೈಡ್ ಬಂದ್ರೆ ಅವಳು ಬೇರೆ ಹುಡ್ಗನ ಜೊತೆ ಇರ್ತಾಳೆ

**ರೋಹಿತ್:**

**ಯಾರು ?**

**ಚಮೇಲಿ:**

**ನಮ್ಮ ಅಣ್ಣಾ, ಎಲ್ಲಿದ್ಯ ಅಂತ**

**ರೋಹಿತ್:**

**ಓಕೇ. Let's move**

ರೋಹಿತ್ ಕೈ ಹಿಡ್ಕೊಳೋಕೆ ಹೋಗ್ತಾನೆ, ಬಿಡಿಸ್ಕೊಳ್ಳುತ್ತಾಳೆ.

8. INT.hotel roop.DAY

CUT TO:

ಅರವಿಂದ್ ಬಂದು ಕಾಯ್ತಾ ಇರ್ತಾನೆ, ಚಮೇಲಿ ಲೇಟ್ ಆಗಿ ಬಂದು

**ಚಮೇಲಿ:**

(ವೈಡ್ ಶಾಟ್)

**ಸಾರೀ**

**ಅರವಿಂದ್:**

**ಸ್ಪೆಷಲ್ ಕ್ಲಾಸ್ ಇತ್ತಾ ?**

ಮಾತಾಡಲ್ಲ ( ಸ್ವಲ್ಪ ಟೆನ್ಶನ್ ಆಗ್ತಾಳೆ)

**ಅರವಿಂದ್:**

**ಬಾದಷಾ ಹತ್ರ ಯಾರ್ ಜೊತೆ ಇದ್ರಿ**

**ಚಮೇಲಿ:**

**ಹೊ... ನೋಡ್ಬಿಟ್ರಾ. ನನ್ನ ಕ್ಲಾಸ್ಮೇಟ್ ರೋಹಿತ್ ಅಂತ**

**ಅರವಿಂದ್:**

**ಅಷ್ಟೇನಾ ?**

**ಚಮೇಲಿ:**

**ಸಧ್ಯಕ್ಕೆ**

**ಅರವಿಂದ್:**

**ಅಂದ್ರೆ ?**

**ಚಮೇಲಿ:**

**ಗೊತ್ತಿಲ್ಲ...**

**ಅರವಿಂದ್:**

**ಮತ್ತೆ ನನ್ನ ಕಥೆ ?**

**ಚಮೇಲಿ:**

**ನಿಂದು ಮುಗಿದು ಹೋಗಿರೋ ಕಥೆ**

**ಅರವಿಂದ್:**

**ಮತ್ತೆ ನನ್ನ್ಯಾಕೆ ಲವ್ ಮಾಡ್ದೆ**

**ಚಮೇಲಿ:**

**ನಾನ್ ಯಾವತ್ತಾದ್ರೂ ಬಂದು ನಿನ್ನ ಲವ್ ಮಾಡ್ತಾ ಇದೀನಿ ಅಂತ ಹೇಳಿದ್ನಾ ??**

**ಅರವಿಂದ್:**

**ಚಂದು, ಹಾಗೆಲ್ಲ ಮಾತಾಡ್ಬೇಡ. ನಾನ್ ನಿನ್ನ ಪ್ರಾಣಕಿಂತ ಹೆಚ್ಚಾಗಿ ಪ್ರೀತಿ ಮಾಡ್ತೀನಿ**

**ಚಮೇಲಿ:**

**ನಿನ್ನ ಪ್ರೀತಿ ತಂಗೊಂಡು ಉಪ್ಪು-ಖಾರ ಹಾಕ್ಲ ??**

**ಅರವಿಂದ್:**

**Please ಇನ್ನೊಂದು ಸಲ ಯೋಚ್ನೆ ಮಾಡು ಚಂದನ**

**ಚಮೇಲಿ:**

**ನನಗೆ ಈ ಪ್ರೀತಿಲಿ ಎಲ್ಲ ನಂಬಿಕೆ ಇಲ್ಲ, ಈ ಪ್ರಪಂಚ ನಿಂತಿರೋದೇ ದುಡ್ದು ಮೇಲೆ, ನನಗೆ ದುಡ್ಡೇ ಮುಖ್ಯ ಯೋಚ್ನೆ ಮಾಡೋಕೆ ಏನು ಉಳಿದಿಲ್ಲ**

**ಅರವಿಂದ್:**

**ತೂ ನಿನ್ನಂಥ ಡಗಾರ್ಗೆ ಲವ್ ಮಾಡಿದ್ನಲ್ಲ, ನನ್ನ ಎಕ್ಕಡ ತಗೊಂಡು ನಾನೇ ಹೊಡ್ಕೋಬೇಕು, ದುಡ್ದು ದುಡ್ದು ಅಂತ ಸಾಯ್ತಾ ಇದಿಯಲ್ವಾ, ಒಂದಲ್ಲ ಒಂದು ದಿನ ದುಡ್ಡ್ ಮೇಲೆ ನಿನಗೆ ಅಸಹ್ಯ ಬರುತ್ತೆ**

9. EXT.ROAD.DAY

DISSOLVE TO:

ಚಮೇಲಿ waiting for bus & auto, ಸ್ಟ್ರೈಕ್ ಇರೋದಿದ್ರ ಯಾವ ವೆಹಿಕಲ್ ಸ್ಟಾಪ್ ಮಾಡಲ್ಲ. ಕಾರಿಗೆ ಡ್ರಾಪ್ ಕೇಳ್ತಾಳೆ, ಕಾರ್ ಮುಂದೆ ಹೋಗಿ ನಿಲ್ಲುತ್ತೆ, ಕಾರ್ ವಿಂಡೊ ಹತ್ರ ಬಂದು

**ಚಮೇಲಿ:**

(ಇನ್‌ಸೈಡ್ ಕಾರ್ ವಿಂಡೊ)

**ಸ್ವಲ್ಪ ಹಾಸ್ಪಿಟಲ್ ಹತ್ರ ಡ್ರಾಪ್ ಮಾಡ್ತೀರಾ, ನನ್ನ ಫ್ರೆಂಡ್ಗೆ ಆಕ್ಸಿಡೆಂಟ್ ಆಗಿದೆ**

**ಸಿದ್ಧಾರ್ಥ್:**

(ಫ್ರಮ್ ಔಟ್‌ಸೈಡ್)

**ಬನ್ನಿ. ಡ್ರಾಪ್ ಮಾಡ್ತೀನಿ**

**ಚಮೇಲಿ:**

**Sorry, ತೊಂದ್ರೆ ಕೊಟ್ಟಿದಕ್ಕೆ**

**ಸಿದ್ಧಾರ್ಥ್:**

**ಇಟ್ಸ್ ಕೇ. ನೋ ಪ್ರಾಬ್ಲಮ್**

**ಚಮೇಲಿ:**

**ಹಾಳಾದೋರು ಇವತ್ತೇ ಸ್ಟ್ರೈಕ್ ಮಾಡ್ಬೇಕಿತ್ತಾ ? ?**

**ಸಿದ್ಧಾರ್ಥ್:**

**ಹಃ ಹಃ**

**ಚಮೇಲಿ:**

**ಸ್ವಲ್ಪ ಬೇಗ ಹೋಗ್ತೀರಾ ಬ್ಲಡ್ ಕೊಡ್ಬೇಕಿತ್ತು**

**ಸಿದ್ಧಾರ್ಥ್:**

**ಬ್ಲಡ್ ಗ್ರೂಪ್ ಯಾವ್ದು ?**

**ಚಮೇಲಿ:**

**A+**

**ಸಿದ್ಧಾರ್ಥ್:**

**0+ ಬೇಕಿದ್ರೆ ಹೇಳಿ ನಾನ್ ಕೊಡ್ತೀನಿ**

**ಚಮೇಲಿ :**

**Its k.** ನಂದು **A+**

ಅವನ ವಿಸಿಟ್ ಕಾರ್ಡ್ ಕೊಡುತ್ತಾ

**ಸಿದ್ಧಾರ್ಥ್:**

**fine, if incase ಬ್ಲಡ್ ಎಕ್ಸ್‌ಚೇಂಜ್ ಗೆ ಬ್ಲಡ್ ಬೇಕಿದ್ರೆ ಹೇಳಿ**

ಕಾರ್ಡ್ ಇಸ್ಕೊಳ್ತಾಳೆ

**ಚಮೇಲಿ:**

**okay ಬೈ**

**ಸಿದ್ಧಾರ್ಥ್:**

**ಬೈ**

10. INT.TERRACE.NIGHT

DISSOLVED TO:

ಫೋನ್ cal ಮಾಡುತಾ

**ಚಮೇಲಿ:**

**ಹಲೋ ಸಿದ್ಧಾರ್ಥ್ ಗೌಡ ಅವರ ? ನಾನ್ ಚಂದನ..ಬೆಳಿಗ್ಗೆ ಡ್ರಾಪ್ ತಗೊಂಡ್ನಲ್ಲ**

ಹಾಸಿಗೆ ಮೇಲೆ ಕೂತ್ಕೊಂಡು

**ಸಿದ್ಧಾರ್ಥ್:**

**ಹಾ!! ಹೇಳಿ**

ಸಿದ್ಧಾರ್ಥ್:

**ನೀವು ಡ್ರಾಪ್ ಕೊಟ್ಟಿದ್ರಿಂದ ನನ್ನ friend ಪ್ರಾಣ ಉಳಿತು. ಬೆಳ್ಳಿಗೆ ಅರ್ಜೆಂಟಿಲ್ಲಿ ಥ್ಯಾಂಕ್ಸ್ ಕೂಡ ಹೇಳಿಲ್ಲ ಅದಕ್ಕೆ cal ಮಾಡ್ದೆ**

**ಸಿದ್ಧಾರ್ಥ್:**

**Its k . ಆ ಸಿಚುಯೇಶನ್ನಿಲ್ಲಿ ಯಾರೇ ಇದ್ರು ಹೆಲ್ಪ್ ಮಾಡ್ತಿದೆ**

ಮಾತಾಡೊಧು ಮಾನ್‌ಟೇಜಸ್.

11. EXT.PG.DAY

CUT TO:

ಸಿದ್ಧಾರ್ಥ್ ಬಂದು ಡ್ರಾಪ್ ಮಾಡುತ್ತಾ

**ಸಿದ್ಧಾರ್ಥ್:**

**ಪಾರ್ಟೀ ಗೆ ??**

**ಚಮೇಲಿ:**

**ಆವಾಗ್ಲೇ ಹೇಳಿದ್ನಲ್ಲ ಬರಲ್ಲ ಅಂತ. ಬೈ**

**ಸಿದ್ಧಾರ್ಥ್:**

**ಬೈ**

ಚಮೇಲಿ ರೋಡಲೀ  ನಡೆದುಕೊಂಡು ಹೋಗ್ಬೇಕಾದ್ರೆ ಅವರ PG ಹತ್ರ ಇರೋರೆಲ್ಲ ಒಂಥರಾ ನೋಡ್ತಾ ಇರ್ತಾರೇ. ಒಬ್ಬ ರೇಗಿಸ್ತಾನೆ.  ಕಾಲ್ ಮಾಡ್ತಾಳೆ

**ಚಮೇಲಿ:**

**ಪಾರ್ಟೀಗೆ ಬರ್ತಾ ಇದ್ದೀನಿ**

12. INT.PARTY HALL.NIGHT

Cut TO:

sidd & ಚಮೇಲಿ ಎಲ್ರೂ ಕುಡಿದು ಡ್ಯಾನ್ಸ್ ಮಾಡ್ತ ಇರ್ತಾರೆ. ಚಮೇಲಿ ಇನ್ನೊಂದು ಪೆಗ್ ಹಾಕಿ.  ಸ್ವಲ್ಪ ಬಿಳೋತರ ಆಗುತ್ತೆ ,    ಲೈಟ್ ಆಫ್ ಆಗುತ್ತೆ.

13. EXT.MARKET.DAY

DISSOLVE TO:

ಮಾರ್ಕೆಟ್ ಲಿ ನಡೆದುಕೊಂಡು ಹೋಗುತ್ತಾ , ಅವನ ಎಕ್ಸ್ ಲವರ್ ನೋಡಿ, ಅವನ ಹಿಂದೆ ಹೋಗ್ತಾಳೆ, ಅವನು ಯಾರ್ ಜೊತೇನೋ ತುಂಬಾ ಕ್ಲೋಸ್ ಆಗಿ ಮಾತಾಡ್ತಾ ಇರ್ತಾನೆ, ನೋಡಿದ್ರೆ ಸಿದ್ಧಾರ್ಥ್. ಅಲ್ಲಿಂದ ಓಡಿಹೋಗ್ತಾಳೆ

14. INT. CHAMELI HOME.NIGHT

Cut To:

ಅರವಿಂದ್ಗೆ call ಮಾಡ್ತಾಳೆ

**ಚಮೇಲಿ:**

**ಹೆಲೋ.. ನಾನ್ ಚಂದನ**

**ಅರವಿಂದ್:**

**ಹೆಲ್ಲೋ ನಿಜವಾಗ್ಲೂ ಚಂದನ ನ.. ಇಷ್ಟು ದಿನ ಎಲ್ಲಿ ಹೋಗಿದ್ದೇ**

**ಚಮೇಲಿ:**

**ಮಾತಾಡ್ಬೇಕು, ನನ್ನ ಮನೆ ಅಡ್ರೆಸ್ msg ಮಾಡ್ತೀನಿ ಬಾ**

**ಅರವಿಂದ್:**

**ಹ್ಮ್ ಬರ್ತೀನಿ, ಎಲ್ಲಿಗೆ ಬರ್ಬೇಕು, ಎಷ್ಟೊತ್ತಿಗೆ....**

ಫೋನ್ ಕಟ್ ಮಾಡಿ msg ಮಾಡಿ.... ಏನಾದ್ರೂ ಮಾಡ್ಬೇಕು ಅಂತ ಡಿಸೈಡ್ ಮಾಡೋತಾರ ನೋಡ್ತಾಳೆ. ಅಷ್ಟರಲ್ಲಿ ಒಬ್ಬ ಫೋನ್ ಮಾಡ್ತಾನೆ.

**ಗ್ರಾಹಕ:**

**ಮೆಡಮ್ ಬರ್ಲಾ**

**ಚಮೇಲಿ:**

**ಇಲ್ಲಾ, ನಾನ್ ಸ್ವಲ್ಪ ಬಿಜ಼ಿ ಇದ್ದೀನಿ.**

**ಗ್ರಾಹಕ:**

**ಹೇ ಮೆಡಮ್ ಒಂದು ವಾರದಿಂದ ಕಾಯ್ತಾ ಇದ್ದೀನಿ**

**ಚಮೇಲಿ:**

**ಹ್ಮ್ಮ್ ಓಕೆ 30ಮಿನಿಟ್ಸ್ ಟೈಮ್ ಇದೆ ಬನ್ನಿ**

**ಗ್ರಾಹಕ:**

**ಓ.. ಬಂದೆ ಬಂದೆ.**

15. INT.CHAMELI HOME.NIGHT

DISSOLVE TO:

ಅರವಿಂದ್ ಮನೆ ಒಳಗೆ ಬರ್ತಾನೆ.. ಯಾರೋ ಬೆಡ್‌ರೂಮ್ ಇಂದ ಜಿಪ್ ಹಾಕೊಂಡು ಹೋಗ್ತಾನೆ.

**ಗ್ರಾಹಕ:**

**ಏನ್ ಫಸ್ಟ್ ಟೈಮಾ, ಹೋಗು ದಬ್ಬಾಬಯ್ಯ್ಸ್, ಸಾಲ ಮಾಡಿದ್ದೂಕ್ಕ ಸಾರ್ಥಕ ಆಯ್ತು**

5min ಆದ ಮೇಲೆ ಇವಳು ಬರ್ತಾಳೆ.

**ಚಮೇಲಿ:**

**ಬಂದ್ಯಾ ಕುತ್ಕೊ**

**ಅರವಿಂದ್:**

**ಚಂದನ ಏನ್ ಇದೆಲ್ಲ**

**ಚಮೇಲಿ:**

**ಸೋಫಾ, ಟೀವೀ, ಫೋನ್, ಫ್ಯಾನ್**

**ಅರವಿಂದ್:**

**ಕರೆಕ್ಟ್ ಆಗಿ ಹೇಳು**

**ಚಮೇಲಿ:**

**ಎಲ್ಲ ನಿಮ್ಮ ಕೃಪೆ**

**ಅರವಿಂದ್:**

**ಏನ್ ಹೇಳ್ತಿದ್ಯಾ**

**ಚಮೇಲಿ:**

**ಏನು ಗೊತಿಲ್ದೆ ಇರೋ ಹಂಗೇ ನಾಟ್ಕ ಆಡಬೇಡ,**

**ನಿನ್ನ ಲವ್ ಮಾಡ್ದೆ ಇರೋ ಒಂದೇ ಕಾರಣಕ್ಕೆ, ನಿನ್ನ ಫ್ರೇಂಡ್ ಜೊತೆ ಸೇರ್ಕೊಂಡು ನನ್ನ ಲೈಫ್ನೇ ಹಾಳ್ ಮಾಡ್ಬಿಟ್ಟ್ಯಲ್ಲ**

**ಅರವಿಂದ್:**

**ಏನ್ ಮಾತಾಡ್ತೀದ್ಯ.. ?? ನೋಡು ಚಂದನ ನಮ್ಮ ಪ್ರೀತಿ ಮೇಲೆ ಆಣೆಗೂ ನಂಗೇನ್ ಗೊತಿಲ್ಲ, ಏನ್ ಕರೆಕ್ಟ್ ಆಗಿ ಹೇಳು**

**ಚಮೇಲಿ:**

**ಅದು**

ಅಳೋಕೆ ಸ್ಟಾರ್ಟ್ ಮಾಡಿ ಎಲ್ಲ ಹೇಳ್ತಾಳೆ, ಫ್ಲಾಶ್ ಬ್ಯಾಕ್

16. INT.PARTY HALL.NIGHT

Cut TO:

ಚಮೇಲಿ ಇನ್ನೊಂದು ಪೆಗ್ ಹಾಕಿ. ಸ್ವಲ್ಪ ಬಿಳೋತರ ಆಗುತ್ತೆ , ಲೈಟ್ ಆಫ್ ಆಗುತ್ತೆ. ಆವಾಗ ಸಿದ್ದಾರ್ಥ ನಾ ಎಳೆದು ಹಿಡ್ಕೊತಾಳೆ, ಅವನು ತುಂಬಾ ಹತ್ತಿರ ಬಂದು ಎರಾಟಿಕ್ ಆಗಿ ನೋಡ್ತಾನೆ. Pub ಲೀ ಲೈಟ್ ಆನ್ ಆಫ್ ಮಾಡ್ತ ಇರ್ತಾರೆ,

17. INT.SIDDARTH HOME.NIGHT

FADE IN :

ಚಮೇಲಿಗೆ ಕನವರಿಕೆ ಬಂದು ಎಚ್ಚರವಾಗುತ್ತೆ, ಮೈ ಮೇಲೆ ಬಟ್ಟೆ ಇಲ್ಲದೇ, ಬೇಡ್ಶೀಟ್ ಹೊದ್ಸಿರೋಧು ಗೊತ್ತಾಗಿ

**ಚಮೇಲಿ:**

**ನನ್ನ ಬಟ್ಟೆ ಎಲ್ಲೋ ?**

ಧಮ್ ಹೊಡಿಯುತಾ

**ಸಿದ್ದಾರ್ಥ್:**

ನಗ್ತಾನೆ

**ಚಮೇಲಿ:**

**ಏನ್ ಮಾಡ್ದೋ ಲೋಫರ್ ?**

**ಸಿದ್ದಾರ್ಥ್:**

**ಗಂಡಸಾಗಿ ಏನ್ ಮಾಡ್ಬೇಕೋ ಅದೆಲ್ಲ ಮಾಡ್ದೆ**

ಪರ್ಸಿನ್ಲ್ಲಿ ಇರೋ ಅವಳು ಫೋನ್ ಎತ್ತಿಕೊಂಡು

**ಚಮೇಲಿ:**

**ನಿನ್ನ ಸುಮ್ನೆ ಬಿಡಲ್ಲ, ಸಾಯೋವರ್ಗೂ ಕಂಬಿ ಎಣಿಸೋ ಹಾಗೆ ಮಾಡ್ತೀನಿ, ನೋಡು**

**ಸಿದ್ದಾರ್ಥ್:**

**ಸಿಮ್ ಇಲ್ಲಿದೆ... ಏನು ಪೋಲೀಸ್ ಕಂಪ್ಲೇಂಟ್ ಕೊಡ್ತೀಯಾ.. ಕೊಡು. ಪೋಲೀಸ್ ಅವರು ನನ್ನ, ನಿನ್ನ ನಿಮ್ಮ ಅಮ್ಮನ್ನ ಕರಿಸಿ ನೋಡಿ ನಿಮ್ಮ ಮಗ್ಳು ಹಿಂಗೇಲ್ಲಾ ಮಾಡಿಸ್ಕೊಂಡು ಕಂಪ್ಲೇಂಟ್ ಕೊಟ್ಟಿದಾಳೆ ಅಂತಾರೆ, ಆವಾಗ ನಿಮ್ಮ ಅಮ್ಮ ಅಲ್ಲೇ ಎದೆ ಹೊಡ್ಕೊಂಡು ಸಾಯ್ತಾರೆ.**

**ಚಮೇಲಿ:**

**ನೋ. ಹಂಗೆ ಆಗ್ಬಾರ್ದು**

**ಸಿದ್ದಾರ್ಥ್:**

**ಹಂಗ್ ಆಗ್ಬಾರ್ದು ಅಂದ್ರೆ, ನಾ ಹೇಳಿದ್ಹಂಗೆ ಕೇಳ್ಬೇಕು**

**ಚಮೇಲಿ:**

**ಕ್ರೈಯಿಂಗ್**

**ಸಿದ್ದಾರ್ಥ್:**

**ಕೆಲ್ಸ ಏನು ಅಂತೀಯಾ ?? ತುಂಬಾ ಸಿಂಪಲ್. . ಸ್ವಲ್ಪ ಬೆವರು ಸುರಿಸ್ಬೇಕು ಅರ್ಥ ಆಗ್ಲಿಲ್ವಾ..**

ಮುಖ ಎತ್ತಿ ಅವನ ಕಡೆ ನೋಡ್ತಾಳೆ

**ಸಿದ್ದಾರ್ಥ್:**

**ಒಂಥರಾ ಎಕ್ಸ್‌ಚೇಂಜ್ ಆಫರ್ ಇದ್ಧಂಗೆ, ಅವರು ನಿನಗೆ ದುಡ್ಡು ಕೊಡ್ತಾರೆ, ನೀನು ಅವರಿಗೆ ಸುಖ ಕೊಡ್ಬೇಕು**

**ಚಮೇಲಿ:**

**ನಾನ್ ಸತ್ರೂ ಅಂತ ಕೆಲ್ಸ ಮಾಡಲ್ಲ**

**ಸಿದ್ಧಾರ್ಥ್:**

**ನಿಮ್ಮ ಅಮ್ಮ ಸಾಯ್ತಾರೆ ಅಂದ್ರೆ??**

ಚಮೇಲಿ ಫುಲ್ ಶಾಕ್ ಆಗ್ತಾಳೆ.. ಮತ್ತೆ ಅಳೋಕೆ ಶುರು ಮಾಡ್ತಾಳೆ

**ಸಿದ್ಧಾರ್ಥ್:**

**ನಾವು ಮಾಡಿರೋ ಸಾಧನೆ ಈ ಮೊಬೈಲ್ಲಿ ಇದೆ. ನನ್ನ ಫೇಸ್ನಾ ಬ್ಲರ್ ಮಾಡಿ, ಊರು ತುಂಬಾ ಟೀವೀ ಚ್ಯಾನೆಲ್ ಗೆ, ವಾಟ್'ಸ್ ಅಪ್ & mms ಮಾಡ್ತೀನಿ. ಹಂಗೆ ನಿಮ್ಮ ಅಮ್ಮನಿಗೂ ತೋರಿಸ್ತೀನಿ, ನೋಡಿ ನಿಮ್ಮ ಮಗಳು ಹೇಂಗೆ ಅಂತ.**

ತುಂಬಾನೇ ಅಳ್ತಾ ಇರ್ತಾಳೆ

**ಸಿದ್ಧಾರ್ಥ್:**

**ಆಗಿದ್ದು ಆಗ್ಲಿ ಅಂತ ಕಂಪ್ಲೇಂಟ್ ಕೊಟ್ರು, ಹೊರಗಡೇ ಬರೋ ಕೆಪ್ಯಾಸಿಟೀ ನಮಗೆ ಇದೆ**

**ಸಿದ್ಧಾರ್ಥ್:**

**ನೀನ್ ಸತ್ತು ನಿಮ್ಮ ಅಮ್ಮ ಸಾಯೋಕ್ಕಿಂತ, ಬದುಕಿದಾಗ್ಲೇ, ನಿಮ್ಮ ಅಮ್ಮನ ರಾಣಿ ತರ ನೋಡ್ಕೋಬೋದು ..ಮನುಸ್ಸು ಮಾಡಿದ್ರೆ ಬಂದಿದ್ದು ದುಡ್ಡಲಿ 50-50.. ಯೋಚ್ನೆ ಮಾಡು.**

ಸ್ವಲ್ಪಾನೇ ತಲೆ ಎತ್ತಿ ಅವನ ನೋಡ್ತಾಳೆ, ಅವರ ಮನೆ ಹತ್ರ ಒಂಥರಾ ನೋಡ್ತಿದ್ದು, ಅವಳ್ ಎಕ್ಸ್ ಅಂದಿದ್ದು ಎಲ್ಲ ನೆನಪಾಗಿ... ಹೌದು ಅನ್ಕೊಂಡಿದ್ದಾರೆ, ಹಾಗೆ ಮಾಡ್ತೀನಿ ಅನ್ನೋ ಹಾಗೆ ಉಗುಳು ನುಂಗುತಾಳೆ.

18. INT.SIDDHART HOME.DAY

Fade in:

ಡೋರ್ ಓಪನ್ ಆಗೋದು ಕ್ಲೋಸ್ ಆಗೋಧು, ರೂಮ್ ಒಳಗಡೆ ಇರೋ ಬೆಳಕು ಆಚೆ ಬೀಳೋದು

**ಚಮೇಲಿ (ವಾಯ್ಸ್ ಓವರ್):**

**ಮೊದ ಮೊದ್ಲು ಅಸಹ್ಯ ಆಗೋದು,, ಹೋಗ್ತಾ ಹೋಗ್ತಾ ಬಟ್ಟೆ , ನೋಡಿದ್ರೆ ಅಸಹ್ಯ ಆಗೋದು...**

ಸಿದ್ಧಾರ್ಥ್ ಜೊತೆ ಮಾತಾಡೋದು, ಕೋಪದಲ್ಲಿ ಫುಲ್ ದುಡ್ಡು ಕಿತ್ಕೊಳೋದು

**ಚಮೇಲಿ (ವಾಯ್ಸ್ ಓವರ್):**

**ಬೆವರು ಸುರಿಸಿ ದುಡಿಯೊಳು ನಾನು, ಅವನಿಗೆ ಯಾಕೆ ಅರ್ಧ ದುಡ್ಡು ಕೊಡ್ಬೇಕು ಅಂತ ನಾನೇ ಓನರ್ & ಪ್ರೊಪ್ರೈಟರ್ ಆಗ್ಬಿಟ್ಟೆ**

ಕ್ಯಾಮರ ಲೆಫ್ಟ್ to ರೈಟ್ ಹೋಗು ತ್ತೆ.

19. INT.CHAMELI HOME.DAY

MATCH CUT:

ಕ್ಯಾಮರ ರೈಟ್ ಟು ಲೆಫ್ಟ್ ಬರುತೆ. ಸಿಗರೇಟ್ ಸೇದುತ್ತಾ ಕೂತಿರ್ತಾಳೆ, ಟೇಬಲ್ ಮೇಲೆ ಡ್ರಿಂಕ್ಸ್ ಇರು ತ್ತೆ

**ಚಮೇಲಿ (ವಾಯ್ಸ್ ಓವರ್):**

**ಮನೆ, ಮನಸ್ಸು ಎರಡು ಬದಲಾಗಿತ್ತು, ರಾಜಕಾರಣಿಗಳಿಂದ ಹಿಡಿದು ಗಾಂಜಾ ಹೊಡಿಯೋರ್ವರ್ಗೂ ಬರೋರು....ಬರ್ಲಿಲ್ಲ ಅಂದ್ರೆ ನಾನೇ ಹುಡ್ಕೊಂಡು ಹೋಗ್ತಿದೆ.**

20. INT.CHAMELI HOME.NIGHT

Match cut

**ಅರವಿಂದ್:**

**ಈ ದರಿದ್ರವಾದ ಕೆಲ್ಸನಾ ಬಿಟ್ಬಿಡು ಚಂದನ**

**ಚಮೇಲಿ:**

**ದರಿದ್ರವಾದ ಅನ್ಬೇಡ, ನೀನು ಇದನ್ನ ಸೂಳೆಗಾರಿಗೆ ಅನ್ನಬೋದು ಬಟ್ ನಾನ್ ಹಂಗ್ ಹೇಳಲ್ಲ, ಯಾಕಂದ್ರೆ ನಾನ್ ಈ ದುಡ್ಡಿಂದ ಶೋಕಿ ಮಾಡಿದ್ದಿನಿ, ಅನ್ನ ತಿಂದಿದ್ದೀನಿ**

**ಅರವಿಂದ್:**

**ನನ್ನ ಮದ್ವೆ ಆಗ್ತೀಯಾ ??**

**ಚಮೇಲಿ:**

**ನಾನ್ ಸುಮಾರು ಮದ್ವೆ ಆಗಿದ್ದೀನಿ ಬಟ್ ತಾಳಿ ಕಟ್ಟಿಸ್ಕೊಂಡಿಲ್ಲ,**

**ಅರವಿಂದ್:**

**ನಾನ್ ಸೀರೀಯಸ್ ಆಗಿ ಕೇಳ್ತಿದ್ದೀನಿ**

**ಚಮೇಲಿ:**

**ಸರಿ ಇವತ್ತೆಲ್ಲ ಯೋಚ್ನೆ ಮಾಡಿ ನಾಳೆ ಬಾ .ಹಾ!! ಹಳೇ ಪ್ರೇಮಿಯಾಗಿ ಬಾ, ಹೊಸ ಗಿರಾಕಿ ಆಗಿ ಬರ್ಬೇಡ**

**ಅರವಿಂದ್:**

**ಬರ್ತೀನಿ. ಕೆಲ್ಸ ಇದೆ.**

ಎಂದು ಹೇಳಿ ಹೋಗ್ತಾನೆ.. ಇವಳು ಸ್ವಲ್ಪ ಹೊತ್ತು ಯೋಚಿ ಮಾಡಿ ಲೆಟರ್ ಬರಿಯೋಕೆ ಶುರು ಮಾಡ್ತಾಳೆ. ಅಮ್ಮ ಅಂತ ಬರಿಯೋದು ರಿಜಿಸ್ಟರ್ ಮಾಡುತ್ತಾ..

**ಚಮೇಲಿ:**

**ಪ್ರತಿಸಲ ಮಂಚದ ಮೇಲೆ ಮಲ್ಗಿದ್ದಾಗ್ಲೂ ಚಿತೆ ಮೇಲೆ ಮಲ್ಗಿದ ಹಾಗೆ ಆಗೋದು. ಚಿತೆ ಮೇಲೆ ದೇಹ ಮಾತ್ರ ಸುಡುತ್ತೇ ಮಂಚದ ಮೇಲೆ ದೇಹ, ಮನಸ್ಸು ಎರಡು ಸುಡುತ್ತೇ.. ಹೌದು ಅವತ್ತು ಅರವಿಂದ ಹೇಳಿದ್ದು ನಿಜ ಆಯಿತ್ತು, ನನಗೆ ಹಣ ಈ ಜೀವ್ನ ಎರಡು ಅಸಹ್ಯ ಆಗಿದೆ. ಇಷ್ಟು ದಿನ ಅಮ್ಮನಿಗೋಸ್ಕರ ಬದುಕಿದ್ದೆ. . . ಈವಾಗ ನೀನು ಇಲ್ಲಾ, ನಾನು ನಿನ್ನ ಹತ್ತಿರಾನೇ ಬರ್ತಾ ಇದ್ದೀನಿ.. ನನ್ನ ಸಾವಿಗೆ ನಾನೇ ಕಾರಣ**

ಚಮೇಲಿ ಅಂತ ಸಿಗ್ನೇಚರ್ ಹಾಕಿ, ಮತ್ತೆ ಹೊಡಿದು ಹಾಕಿ ಚಂದನ ಅಂತ ಬರೀತಾಳೆ, ಟೇಬಲ್ ಕೆಳಗೆ ಇರೋ ಟ್ಯಾಬ್ಲೆಟ್ ತಿಂದು ಬಾಟಲ್ಲಿ ಇರೋ ನೀರು ಕುಡಿದು ಟೇಬಲ್ ಇಡ್ತಾಳೆ.

**21.** INT.CHAMELI HOME. DAY

Match cut

ಇನ್ಸ್ಪೆಕ್ಟರ್ ಕೈಲಿ ಇರೋ ಸಿಗರೇಟ್ ಸುಡುತ್ತೆ, ಇನ್ಸ್ಪೆಕ್ಟರ್ ವಾಸ್ತವಕ್ಕೆ ಬಂದು ಸಿಗರೇಟ್ ಎಸೀತಾನೆ, ಟೇಬಲ್ ಮೇಲೆ ಇರೋ ನೀರು ಕುಡಿದು ಇಡ್ತಾನೆ

**ಕಾನ್ಸ್ಟೆಬಲ್:**

**ಸರ್ ನನಗೆ ಯಾಕೋ, ಆ ಪೇಪರ್ ಸೀನನ್ ಮೇಲೆ ಅನುಮಾನ ಸಾರ್ ?**

ಇನ್ಸ್ಪೆಕ್ಟರ್ ಸಿಗರೇಟ್ ಹಚ್ಕೊಳ್ತಾ, ಬಿಟ್ಬಿಡುವಂತೆ ಸನ್ನೆ ಮಾಡುತ್ತಾನೆ

**ಕಾನ್ಸ್ಟೆಬಲ್:**

**ಸಾರ್ ಇದು ಮರ್ಡರ್ ಹಾ ?? ಸ್ಯೂಯಿಸೈಡ್ ಹಾ ??**

ಇನ್ಸಪೆಕ್ಟರ್ ಟೇಬಲ್ ಮೇಲಿಂದ ಎದ್ದು ಹೋಗುತಾ...

**ಇನ್ಸ್ಪೆಕ್ಟರ್:**

**ಮನಸ್ಸುಗಳ ಸಂಘರ್ಷಕ್ಕೆ. ದೇಹ ಗುಜುರಿ ಸೇರುತ್ತೆ**

**ಕಾನ್ಸ್ಟೆಬಲ್:**

**ಸಾರ್ ಅರ್ಥ ಆಗ್ಲಿಲ್ಲ**

ನಗುತ್ತಾ, ಡೋರ್ ಆಚೆ ಬರುತ್ತಾನೆ.. ಇನ್ಸ್ಪೆಕ್ಟರ್ ಗೆ call ಬರುತ್ತೆ.. ಕ್ಯಾಮರ ಒಳಗಡೆ ಇರುತ್ತೆ. ಕಾನ್ಸ್ಟಬಲ್ ಗೆ ಡೋರ್ ಕ್ಲೋಸ್ ಮಾಡುವಂತೆ ಹೇಳುತ್ತಾನೇ, ಕಾಲ್ ರಿಸೀವ್ ಮಾಡಿ

**ಇನ್ಸ್ಪೆಕ್ಟರ್:**

**ಹಾ**

**In Phone**

**ಸರ್.. ರಿಂಗ್ ರೋಡ್ ಹತ್ರ ಸಿದ್ಧಾರ್ಥ್ ಗೌಡ ಅವರ್ದು ಮರ್ಡರ್ ಆಗಿದೆ**

**ಇನ್ಸ್ಪೆಕ್ಟರ್:**

**ಹಾಆಆ. What . ಶಾಕ್**

ಕಾನ್ಸ್ಟಬಲ್ ಡೋರ್ ಕ್ಲೋಸ್ ಮಾಡ್ತಾನೆ.. ಎಂಡ್ ಕ್ರೆಡಿಟ್ಸ್

**End**